ಅಧ್ಯಕ್ಷರು.—ಪ್ರಶ್ನೆ 86 ಮತ್ತು 146 ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ ಸದಸ್ಯರು ಪ್ರಶ್ನೆ ಕೇಳಲು ಅನುಕೂಲವಾಗುತ್ತದೆ.

ವಿಷಯ: ನೇತ್ರಾವತಿ ಹಾಗೂ ಇತರ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸುವುದು.

ಪ್ರ. 270 (86) ಶ್ರೀ ಧನುಂಜಯ ಕುಮಾರ್ (ಮಂಗಳೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ನೆರಿಯದಲ್ಲಿ ನೇತ್ರಾವತಿ ಅಥವಾ ಇತರ ನದಿಗಳಿಗೆ ಅಣೆಕಟ್ಟು ಕಟ್ಟಿಸಿ ಮಂಗಳೂರು ಮಹಾನಗರಪಾಲಿಕೆ ಪ್ರದೇಶ ಹಾಗೂ ಸುತ್ತಮುತ್ತಲೂ ಕುಡಿಯುವ ನೀರು ಹಾಗೂ ಕೈಗಾರಿಕೆಗಳಿಗೆ ಬೇಕಾಗುವ ನೀರು ಸರಬರಾಜು ಮಾಡುವ ನೆರಿಯ ಯೋಜನೆಯ ಕೆಲಸ ಪ್ರಾರಂಭಿಸುವ ಯೋಜನೆ ಸರಕಾರದವರ ಮುಂದೆ ಇದೆಯೇ;

(ಆ) ಈ ಯೋಜನೆಯ ನೀಲಿ ನಕಾಶೆ ತಯಾರಿಸಲಾಗಿದೆಯೇ;

(ಇ) ಯೋಜನೆಯ ಅಂದಾಜು ವೆಚ್ಚ ವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).:—

(ಅ) ಯೋಜನೆಯು ಸವಿಸ್ತಾರ ಅನ್ವೇಷಣೆಯ ಹಂತದಲ್ಲಿದೆ.

(ಆ) ಇಲ್ಲ.

(ಇ) ಪ್ರಾರಂಭಿಕ ವರದಿಯಂತೆ 201 ಕೋಟಿ ರೂಪಾಯಿಗಳು.

ವಿಷಯ: ಬೆಳ್ತಂಗಡಿ ತಾಲ್ಲೂಕು ನೆರಿಯ ಯೋಜನೆ ಕುರಿತು.

ಪ್ರ. 278 (146) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿರ್ಮಿಸಲುದ್ದೇಶಿಸಿರುವ ನೆರಿಯ ಯೋಜನೆಯ ಕಾರ್ಯ ಈಗ ಯಾವ ಹಂತದಲ್ಲಿ ಇದೆ;

(ಆ) ಸದರಿ ಯೋಜನೆಯಿಂದಾಗಿ ಮುಳುಗಡೆಯಾಗುವ ಪ್ರದೇಶಗಳಾವುವು ಹಾಗೂ ಇದರ ವಿಸ್ತೀರ್ಣ ಎಷ್ಟು;

(ಇ) ಮುಳುಗಡೆ ಪ್ರದೇಶದ ಜನರಿಗೆ ಸೂಕ್ತ ಪರಿಹಾರ ನೀಡದೆ ಅವರನ್ನು ಸ್ಥಳಾಂತರಿಸಬಾರದು ಮತ್ತು ಸ್ಥಳಾಂತರಗೊಂಡವರಿಗೆ ಬದಲಿ ವ್ಯವಸ್ಥೆ ಮಾಡದೆ ಸ್ಥಳಾಂತರಿಸಬಾರದು ಎಂಬುದು ಸರ್ಕಾರದವರ ನೀತಿಯಲ್ಲವೇ;

(ಈ) ಹಾಗಾದರೆ ಸರ್ಕಾರದವರು ಮುಳುಗಡೆ ಪ್ರದೇಶದ ಜನರಿಗೆ ಬದಲಿ ವ್ಯವಸ್ಥೆಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅನ್ವೇಷಣೆಯಲ್ಲಿದೆ.

(ಆ) ಪೂರ್ಣ ಜಲಾಶಯ ಮಟ್ಟ ೧೧ ಎಲ್ 107·5 ಮೀಟರ್‌ಗಳವರೆಗೆ ಈ ಕೆಳಕಂಡ ಹಳ್ಳಿಗಳು ಮುಳುಗಡೆಯಾಗುತ್ತವೆ:

1. ಕಾಲಂಜಾ
2. ಪುಡುಪೆಟ್ಟು — ಪೂರ್ಣವಾಗಿ
3. ಪತ್ಯಾದಕ
4. ಚಿಬಿದ್ರಿ
5. ನಿಡ್ಲಿ — ಭಾಗಶಃ
6. ನೆರಿಯ

ಮುಳುಗಡೆಯಾಗುವ ಪ್ರದೇಶದ ವಿಸ್ತೀರ್ಣ —4050 ಹೆಕ್ಟೇರುಗಳು (ತಾತ್ಕಾಲಿಕ)
(10007 ಎಕರೆಗಳು)

(ಇ) ಅಹುದು.

(ಈ) ಸೂಕ್ತ ಸಮಯದಲ್ಲಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ವಿ. ಧನುಂಜಯ ಕುಮಾರ್.—ಮಂಗಳೂರು ಹತ್ತಿರ ಪೆಟ್ರೋಕೆಮಿಕಲ್ಸ್ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರ ಇದೆ. ಇದಕ್ಕೆ ಬೇಕಾದ ನೀರನ್ನು ಒದಗಿಸಲು ಅತ್ಯಂತ ಅಗತ್ಯವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಯೋಜನೆಗೆ ಬೇಕಾದಂಥ ನೀಲಿ ನಕಾಸೆಯನ್ನು ಯಾವಾಗ ತಯಾರಿಸುತ್ತೀರಿ? ಮತ್ತು ಈ ಯೋಜನೆಯಿಂದ ಆಗತಕ್ಕ ಇತರ ಉಪಯೋಗಗಳಾದರೂ ಏನು ಎಂಬುದನ್ನು ಹೇಳುತ್ತೀರಾ?